# ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

ನಿಗಮದ ಗುರುತಿನ ಸಂಖ್ಯೆ (ಸಿ.ಐ.ಎನ್): ಯು40109ಕೆಎ1999ಎಸ್‌ಜಿಸಿ025521

ನಿಗಮ ಕಾರ್ಯಾಲಯ, ಕಾವೇರಿ ಭವನ, ಕೆ.ಜಿ.ರಸ್ತೆ, ಬೆಂಗಳೂರು-560009.

ದೂರವಾಣಿ ಸಂಖ್ಯೆ: 080-22212343

ಅಂತರ್ಜಾಲ: https://kptcl.karnataka.gov.in

ಇ-ಮೇಲ್ ವಿಳಾಸ: director.ahr.kptcl@gmail.com


ಸಂಖ್ಯೆ: ಕವಿಪ್ರನಿನಿ/ಕೆಸಿಓ-01/38004/2022-23/627 ದಿನಾಂಕ: 12 MAY 2023

## ಸುತ್ತೋಲೆ

ವಿಷಯ: ಕುಟುಂಬ ಪಿಂಚಣಿ ಮಂಜೂರಾತಿಗಾಗಿ ಪ್ರಸ್ತಾವನೆಯನ್ನು ತಡವಾಗಿ/ ವಿಳಂಬವಾಗಿ ಸಲ್ಲಿಸುತ್ತಿರುವ ಬಗ್ಗೆ.

******

ಪಿಂಚಣಿದಾರರು ಮರಣ ಹೊಂದಿದ ನಂತರ ಅರ್ಹವಾರಸುದಾರರಿಗೆ ಮರಣ ನಂತರ ಕುಟುಂಬ ಪಿಂಚಣಿ ಸವಲತ್ತುಗಳನ್ನು (Death after Retirement Family Pension cases) ಇತ್ಯರ್ಥಪಡಿಸುವ ಸಲುವಾಗಿ ಕಳುಹಿಸುತ್ತಿರುವ ಪ್ರಸ್ತಾವನೆಗಳು ಮರಣ ಹೊಂದಿದ ನಂತರ ಸುಮಾರು 1 ರಿಂದ 2 ವರ್ಷಗಳ ನಂತರ ಅಧಿಕರಣೆಗಾಗಿ ನಿಗಮ ಕಾರ್ಯಾಲಯಕ್ಕೆ ಕಳುಹಿಸುತ್ತಿರುವುದು ಕಂಡುಬಂದಿರುತ್ತದೆ. ಇದರಿಂದಾಗಿ ಮೃತ ಪಿಂಚಣಿದಾರರ ಅರ್ಹವಾರಸುದಾರರಿಗೆ ಕುಟುಂಬ ಪಿಂಚಣಿಯನ್ನು ಸಕಾಲದಲ್ಲಿ ಅಧಿಕರಿಸಿ ಇತ್ಯರ್ಥಪಡಿಸುವಲ್ಲಿ ವಿಳಂಬವಾಗುತ್ತಿದೆ. ಆದ್ದರಿಂದ ಪಿಂಚಣಿದಾರರು ಮರಣ ಹೊಂದಿದ ನಂತರ ಅರ್ಹವಾರಸುದಾರರಿಗೆ ಮರಣ ನಂತರ ಕುಟುಂಬ ಪಿಂಚಣಿಯನ್ನು ಅಧಿಕರಿಸುವ ಸಲುವಾಗಿ ಪಿಂಚಣಿ ಬಟವಾಡೆ ಅಧಿಕಾರಿಗಳು ಪ್ರಸ್ತಾವನೆಯನ್ನು ಸಲ್ಲಿಸುವಾಗ ಈ ಕೆಳಕಂಡ ಮಾರ್ಗಸೂಚಿಗಳನ್ನು ಅನುಸರಿಸುವುದು.

1. ಪಿಂಚಣಿದಾರರು ಮರಣ ಹೊಂದಿದ ಪ್ರಕರಣದಲ್ಲಿ ಅರ್ಹವಾರಸುದಾರರಿಗೆ ಮರಣ ನಂತರ ಕುಟುಂಬ ಪಿಂಚಣಿಯನ್ನು (Death after Retirement Family Pension cases) ಇತ್ಯರ್ಥಪಡಿಸುವ ಸಲುವಾಗಿ ಅಧಿಕರಣೆಗಾಗಿ ಪ್ರಸ್ತಾವನೆಯೊಂದಿಗೆ ಕಳುಹಿಸುವಾಗ ಈ ಕೆಳಕಂಡ ದಾಖಲೆಗಳನ್ನು ಕಳುಹಿಸುವುದು.

   i. ಅರ್ಹವಾರಸುದಾರರಿಂದ/ ಕುಟುಂಬ ಪಿಂಚಣಿಗೆ ನಾಮನಿರ್ದೇಶಿತರಿಂದ ಕುಟುಂಬ ಪಿಂಚಣಿಗಾಗಿ ಅರ್ಜಿಯನ್ನು ಪಡೆದು ಕಳುಹಿಸುವುದು. (ಕಚೇರಿಯ ಮೊಹರಿನೊಂದಿಗೆ ವಿಭಾಗಾಧಿಕಾರಿಯವರು ದೃಢೀಕರಿಸಿದ ಅರ್ಜಿಯ ಮೂಲ ಪ್ರತಿ).

   ii. ಪಿಂಚಣಿದಾರರ ಮರಣ ಸಮರ್ಥನಾ ಪತ್ರದ ಮೂಲ ಪ್ರತಿ.

   iii. ಅರ್ಹವಾರಸುದಾರರು/ ಕುಟುಂಬ ಪಿಂಚಣಿಗೆ ನಾಮನಿರ್ದೇಶಿತರಿಂದ ಗುರುತಿನ ಬಗ್ಗೆ ಸರ್ಕಾರವು ನೀಡಿರುವ ಅಧಿಕೃತ ದಾಖಲಾತಿಯಾದ ಆಧಾರ್ ಕಾರ್ಡ್/ ಭಾರತೀಯ ಚುನಾವಣಾ ಗುರುತಿನ ಚೀಟಿಯನ್ನು ಸಲ್ಲಿಸುವುದು. (ಕಚೇರಿಯ ಮೊಹರಿನೊಂದಿಗೆ ವಿಭಾಗಾಧಿಕಾರಿಯವರು ದೃಢೀಕರಿಸಿದ ಪ್ರತಿ)

   iv. ಅರ್ಹವಾರಸುದಾರರು/ ಕುಟುಂಬ ಪಿಂಚಣಿಗೆ ನಾಮನಿರ್ದೇಶಿತರ ಮೂರು ಮಾದರಿ ಸಹಿಗಳು (ಕಚೇರಿಯ ಮೊಹರಿನೊಂದಿಗೆ ವಿಭಾಗಾಧಿಕಾರಿಯವರು ದೃಢೀಕರಿಸಿದ ಮೂಲ ಪ್ರತಿ)



Scanned with CamScanner

v. ಅರ್ಹವಾರಸುದಾರರು/ ಕುಟುಂಬ ಪಿಂಚಣಿಗೆ ನಾಮನಿರ್ದೇಶಿತರಾದವರ ಇತ್ತೀಚಿನ ಪಾಸ್‌ಪೋರ್ಟ್ ಅಳತೆಯ ಭಾವ ಚಿತ್ರ. (ಕಚೇರಿಯ ಮೊಹರಿನೊಂದಿಗೆ ವಿಭಾಗಾಧಿಕಾರಿಯವರು ದೃಢೀಕರಿಸಿ ಮೂರು ಪ್ರತಿ ಸಲ್ಲಿಸಬೇಕು)

vi. ಪಿಂಚಣಿ ಪಾವತಿ ಆದೇಶದ ಎರಡೂ ಭಾಗಗಳಲ್ಲಿ ಅಂದರೆ, ಬಟವಾಡೆದಾರರ ಮತ್ತು ಪಿಂಚಣಿದಾರರ ಭಾಗದಲ್ಲಿ ಅಂತಿಮ ಪಿಂಚಣಿ ಪಾವತಿ ವಿವರಗಳನ್ನು ದಾಖಲಿಸಿ ದೃಢೀಕರಿಸಿ ಪ್ರಸ್ತಾವನೆಯೊಂದಿಗೆ ಸಲ್ಲಿಸುವುದು.

vii. ಅರ್ಹವಾರಸುದಾರರು/ ಕುಟುಂಬ ಪಿಂಚಣಿಗೆ ನಾಮನಿರ್ದೇಶಿತರಿಂದ ಸ್ಪಷ್ಟವಾದ ಹಾಗೂ ಸರಿಯಾದ ಜನ್ಮದಿನಾಂಕ ದಾಖಲಾಗಿರುವ ಅಧಿಕೃತ ದಾಖಲೆ ಪತ್ರವನ್ನು ಕಳುಹಿಸುವುದು. (ಕಚೇರಿಯ ಮೊಹರಿನೊಂದಿಗೆ ವಿಭಾಗಾಧಿಕಾರಿಯವರು ದೃಢೀಕರಿಸಿದ ಪ್ರತಿ)

viii. ಪಿಂಚಣಿದಾರರ/ ಅರ್ಹವಾರಸುದಾರರ/ ಕುಟುಂಬ ಪಿಂಚಣಿಗೆ ನಾಮನಿರ್ದೇಶಿತರ ಹೆಸರುಗಳಲ್ಲಿ ವ್ಯತ್ಯಾಸವಿದ್ದಲ್ಲಿ, ಕಾನೂನು ರೀತಿಯಲ್ಲಿ ಹೆಸರು ಬದಲಾಯಿಸಿರುವ ದಾಖಲೆಯನ್ನು ಪಡೆದು ದೃಢೀಕರಿಸಿ ಸಲ್ಲಿಸುವುದು.

ix. ಕುಟುಂಬ ಪಿಂಚಣಿಗೆ ಸಂಬಂಧಿಸಿದಂತೆ ನ್ಯಾಯಾಲಯದಲ್ಲಿ ಪ್ರಕರಣ ದಾಖಲಾಗಿದಲ್ಲಿ ನ್ಯಾಯಾಲಯದ ಆದೇಶದ ಮೂಲ ಪ್ರತಿ/ ದೃಢೀಕೃತ ಪ್ರತಿಯನ್ನು ಹಾಗೂ ಅವಶ್ಯಕತೆ ಇದ್ದಲ್ಲಿ ನಿಗಮದ/ ಕಂಪನಿ ಅಧಿಕೃತ ಕಾನೂನು ಸಲಹೆಗಾರರ ಅಭಿಪ್ರಾಯವನ್ನು ಪಡೆದು ಸದರಿ ಅಭಿಪ್ರಾಯ ಪತ್ರದಲ್ಲಿರುವಂತೆ ಪ್ರಸ್ತಾವನೆಯನ್ನು ಸಲ್ಲಿಸುವುದು.

x. ಪಿಂಚಣಿಯಲ್ಲಿ ಆದೇಶದ ಮೇರೆಗೆ, ನಿಗಮದ ಬಾಕಿ ಮೊತ್ತ ಕಡಿತಗೊಳ್ಳುತ್ತಿದ್ದರೆ, ಸದರಿ ಆದೇಶದ ಪ್ರತಿ, ಮೊತ್ತದ ವಿವರ ಹಾಗೂ ಮರು ಪಾವತಿಯ ವಿವರಗಳ ಪಟ್ಟಿಯನ್ನು ದೃಢೀಕರಿಸಿ ಸಲ್ಲಿಸುವುದು.

xi. ಅರ್ಹವಾರಸುದಾರರು/ ಕುಟುಂಬ ಪಿಂಚಣಿಗೆ ನಾಮನಿರ್ದೇಶಿತರ ಬ್ಯಾಂಕ್ ಪಾಸ್ ಪುಸ್ತಕದ ನೆರಳಚ್ಚು ಪ್ರತಿಯನ್ನು ಸಲ್ಲಿಸುವುದು.

xii. ಕುಟುಂಬ ಪಿಂಚಣಿಗೆ ನಾಮನಿರ್ದೇಶಿತರು ಮರು ಮದುವೆಯಾಗದಿರುವ ಬಗ್ಗೆ ಘೋಷಣ ಪತ್ರದ ಮೂಲ/ ದೃಢೀಕೃತ ಪ್ರತಿ.

xiii. ವಿಶೇಷ ಪ್ರಕರಣಗಳಲ್ಲಿ ಪ್ರಕರಣಾನುಸಾರವಾಗಿ ದೃಢೀಕರಣಗಳನ್ನು ಪಿ.ಪಿ.ಓ ಭಾಗಗಳಲ್ಲಿ ದಾಖಲಿಸಿ, ದೃಢೀಕರಿಸಿ ಸಲ್ಲಿಸುವುದು.

2. ಪಿಂಚಣಿದಾರರು ಮರಣ ಹೊಂದಿದ ಪ್ರಕರಣದಲ್ಲಿ ಅರ್ಹವಾರಸುದಾರರಿಗೆ ಮರಣ ನಂತರ ಕುಟುಂಬ ಪಿಂಚಣಿಯನ್ನು (Death after Retirement Family Pension cases) ಇತ್ಯರ್ಥಪಡಿಸುವ ಸಲುವಾಗಿ ಅಧಿಕರಣೆಗಾಗಿ <u>ಮರಣದ ದಿನಾಂಕದಿಂದ 2 ತಿಂಗಳ ಒಳಗಾಗಿ ಮೇಲೆ ತಿಳಿಸಿರುವ ದಸ್ತಾವೇಜುಗಳೊಂದಿಗೆ ಸೂಕ್ತ ಪ್ರಾಧಿಕಾರಕ್ಕೆ ಪ್ರಸ್ತಾವನೆಯನ್ನು ಕಳುಹಿಸುವುದು.</u>

3. ಪಿಂಚಣಿದಾರರು ಮರಣ ಹೊಂದಿದ ಪ್ರಕರಣದಲ್ಲಿ, ಪ್ರಸ್ತಾವನೆಯನ್ನು ಕಳುಹಿಸುವಲ್ಲಿ ವಿಳಂಬಕ್ಕೆ ನ್ಯಾಯಾಲಯದ ಪ್ರಕರಣವು ಕಾರಣವಾದಲ್ಲಿ, ನ್ಯಾಯಾಲಯದ ದಾವೆಯ ವಸ್ತುಸ್ಥಿತಿ ಹಾಗೂ ಮೊಕದ್ದಮೆಯಲ್ಲಿನ ಬೆಳವಣಿಗೆಯ ಬಗ್ಗೆ ಮಾಹಿತಿಯನ್ನು ಪಿಂಚಣಿದಾರರ ಮರಣ ಪ್ರಮಾಣ ಪತ್ರದೊಂದಿಗೆ ಸಂಬಂಧಪಟ್ಟ ಪಿಂಚಣಿ ಶಾಖೆಗೆ ಸಲ್ಲಿಸುವುದು.



Scanned with CamScanner

4. ಕವಿಪ್ರನಿನಿ ಅಕೌಂಟ್ಸ್ ಮ್ಯಾನ್ಯೂಯಲ್ ವಾಲ್ಯೂಮ್-2 ಪಾರ್ಟ್-ಬಿ ಯ ನಿಯಮ 602 ರ ಉಪ ನಿಯಮ (7)ರ ಮೇರೆಗೆ ಪಿಂಚಣಿ ಪಾವತಿ ಆದೇಶದ ಬಟವಾಡೆದಾರರ ಭಾಗವನ್ನು ಸಂಬಂಧಪಟ್ಟ ವಿಷಯ ನಿರ್ವಾಹಕರು ತಮ್ಮ ಅಧೀನದಲ್ಲಿ ಇಟ್ಟುಕೊಳ್ಳುವುದು ಇದನ್ನು ಸಹಾಯಕ ಲೆಕ್ಕಾಧಿಕಾರಿ ಅಥವಾ ಲೆಕ್ಕಾಧಿಕಾರಿಯವರು ಆಗಿಂದಾಗ್ಗೆ ವೈಯುಕ್ತಿಕವಾಗಿ ಮೇಲ್ವಿಚಾರಣೆ ಮಾಡುವುದು ಅಥವಾ ಯಾವುದೇ ಸಮಯದಲ್ಲಾಗಲಿ ಪಿಪಿಓಗಳ ಚಲನವಲನಗಳ ಬಗ್ಗೆ ಗಮನಹರಿಸುವುದು ಸಂಬಂಧಪಟ್ಟ ವಿಷಯ ನಿರ್ವಾಹಕ ಮತ್ತು ಪಿಂಚಣಿ ಬಟವಾಡೆ ಅಧಿಕಾರಿಯವರ ಜವಬ್ದಾರಿಯಾಗಿರುತ್ತದೆ. ಆದ್ದರಿಂದ, ಪಿಂಚಣಿ ಬಟವಾಡೆ ಅಧಿಕಾರಿಯವರು ತಮ್ಮ ವಿಭಾಗದಲ್ಲಿ ಪಿಂಚಣಿ/ ಕುಟುಂಬ ಪಿಂಚಣಿಯನ್ನು ಪಡೆಯುತ್ತಿರುವವರ ಪಿಪಿಓ ಬಟವಾಡೆದಾರರ ಭಾಗವು ಇರುವುದನ್ನು ಖಚಿತಪಡಿಸುವುದು.

5. ಪಿಂಚಣಿ ಪಾವತಿ ಆದೇಶದ ಪಿಂಚಣಿದಾರರ ಭಾಗವು ಕಳೆದು ಹೋಗಿದಲ್ಲಿ, ನಕಲು ಪಿಂಚಣಿ ಪಾವತಿ ಆದೇಶದ ಪಿಂಚಣಿದಾರರ ಭಾಗಕ್ಕಾಗಿ ಪ್ರಸ್ತಾವನೆಯನ್ನು ಕಳುಹಿಸದೇ ಪಿಂಚಣಿದಾರರು ಮರಣ ಹೊಂದಿದ ನಂತರ ಅರ್ಹವಾರಸುದಾರರಿಗೆ ಮರಣ ನಂತರ ಕುಟುಂಬ ಪಿಂಚಣಿ ಸವಲತ್ತುಗಳನ್ನು (Death after Retirement Family Pension cases) ಇತ್ಯರ್ಥಪಡಿಸುವ ಸಲುವಾಗಿ ಪ್ರಸ್ತಾವನೆಯನ್ನು ಕಳುಹಿಸುವಾಗ, ಅರ್ಹವಾರಸುದಾರರಿಂದ ಪಿಪಿಓ ಪಿಂಚಣಿದಾರರ ಭಾಗವು ಕಳೆದುಹೋಗಿರುವ ಬಗ್ಗೆ ಮನವಿ ಪತ್ರ ಪಡೆದು, ಪಿಪಿಓ ಪಿಂಚಣಿದಾರರ ಭಾಗವು ಸಿಕ್ಕಲ್ಲಿ ಕಚೇರಿಗೆ ಹಿಂದಿರುಗಿಸುವ ಬಗ್ಗೆ ಪತ್ರವನ್ನು ಪಡೆದು ದೃಢೀಕರಿಸಿ ಕಳುಹಿಸುವುದು.

ಪಿಂಚಣಿದಾರರ ಮರಣ ನಂತರ ಕುಟುಂಬ ಪಿಂಚಣಿ ಅಧಿಕರಣೆಗಾಗಿ (Death after Retirement Family Pension cases) ಪ್ರಸ್ತಾವನೆಯನ್ನು ಲೋಪದೋಷಗಳಿಲ್ಲದೇ ಸಲ್ಲಿಸಿ ಸಕಾಲದಲ್ಲಿ ಅರ್ಹವಾರಸುದಾರರಿಗೆ ಕುಟುಂಬ ಪಿಂಚಣಿಯನ್ನು ಇತ್ಯರ್ಥಪಡಿಸಲು ಕ್ರಮವಹಿಸುವುದು, ಇಲ್ಲದಿದ್ದಲ್ಲಿ ವಿಳಂಬವನ್ನು ಗಂಭೀರವಾಗಿ ಪರಿಗಣಿಸಲಾಗುವುದು.

ಆದ್ದರಿಂದ, ಪಿಂಚಣಿ ಬಟವಾಡೆ ಅಧಿಕಾರಿಗಳು ಕುಟುಂಬ ಪಿಂಚಣಿ ಅಧಿಕರಣೆಗಾಗಿ ಪೂರಕ ದಾಖಲೆಗಳನ್ನು ಸಲ್ಲಿಸುವಾಗ ಮೇಲಿನ ಅಂಶಗಳ ಬಗ್ಗೆ ವಿಶೇಷ ಗಮನಹರಿಸಿ, ತದನಂತರ ಪ್ರಸ್ತಾವನೆಯನ್ನು ಕವಿಪ್ರನಿನಿ/ ಸಂಬಂಧಪಟ್ಟ ಕಂಪನಿಗಳ ಪಿಂಚಣಿ ಶಾಖೆಗೆ ಸಲ್ಲಿಸಲು ಈ ಮೂಲಕ ಸೂಚಿಸಲಾಗಿದೆ.

ನಿರ್ದೇಶಕರು (ಆ ಮತ್ತು ಮಾ.ಸಂ)
ಕವಿಪ್ರನಿನಿ

3/5/23 3/5/1963/5/23 3/5/23

<u>ಪ್ರತಿಗಳು:</u>

1. ಎಲ್ಲಾ ವ್ಯವಸ್ಥಾಪಕ ನಿರ್ದೇಶಕರು, ಕವಿಪ್ರನಿನಿ/ಎಸ್ಕಾಂ/ಪಿಸಿಕೆಎಲ್.
2. ಎಲ್ಲಾ ನಿರ್ದೇಶಕರು (ತಾಂತ್ರಿಕ), ಎಸ್ಕಾಂ.
3. ಎಲ್ಲಾ ಆರ್ಥಿಕ ಸಲಹೆಗಾರರು, ಕವಿಪ್ರನಿನಿ/ವಿಸಕಂಗಳು.
4. ಎಲ್ಲಾ ಮುಖ್ಯ ಇಂಜಿನಿಯರ್ (ವಿ), ಕವಿಪ್ರನಿನಿ/ವಿಸಕಂಗಳು.
5. ವ್ಯವಸ್ಥಾಪಕ ನಿರ್ದೇಶಕರು/ನಿರ್ದೇಶಕರು (ಪ್ರಸರಣ)/(ಹಣಕಾಸು)/(ಆ.ಮತ್ತು ಮಾ.ಸಂ.), ಕವಿಪ್ರನಿನಿ, ಇವರುಗಳ ಹಿರಿಯ ಆಪ್ತ ಕಾರ್ಯದರ್ಶಿಗಳು, ಬೆಂಗಳೂರು.

<u>www..kptcl.com.karnataka.gov.in→eprasarana ವೆಬ್ ಸೈಟ್‌ನಲ್ಲಿ ಪ್ರಕಟಿಸಲು ಅಧೀಕ್ಷಕ ಇಂಜಿನಿಯರ್(ಐ.ಟಿ ಮತ್ತು ಎಂ.ಐ.ಎಸ್), ಕವಿಪ್ರನಿನಿ., ಕಾವೇರಿ ಭವನ, ಬೆಂಗಳೂರು ರವರ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ.</u>

<u>ಪ್ರತಿಗಳು (ಜಾಲತಾಣದಲ್ಲಿ ಪ್ರಕಟಿಸಿದೆ)</u>

1. ಎಲ್ಲಾ ಅಧೀಕ್ಷಕ ಇಂಜಿನಿಯರ್/ನಿಯಂತ್ರಣಾಧಿಕಾರಿ/ನಿಯಂತ್ರಣಾಧಿಕಾರಿ(ಆಂ.ಪ)/ ಕವಿಪ್ರನಿನಿ/ ವಿಸಕಂಗಳು.
2. ಎಲ್ಲಾ ಕಾರ್ಯನಿರ್ವಾಹಕ ಇಂಜಿನಿಯರ್/ಉಪ ಲೆಕ್ಕನಿಯಂತ್ರಣಾಧಿಕಾರಿ/ ಉಪ ಲೆಕ್ಕನಿಯಂತ್ರಣಾಧಿಕಾರಿ (ಆಂ.ಪ)/, ಕವಿಪ್ರನಿನಿ/ವಿಸಕಂಗಳು.
3. ನಿಗಮ ಕಾರ್ಯಾಲಯದ ಎಲ್ಲಾ ಅಧಿಕಾರಿಗಳು/ಎಲ್ಲಾ ಲೆಕ್ಕಾಧಿಕಾರಿಗಳು(ಆಂ.ಪ), ಕವಿಪ್ರನಿನಿ/ವಿಸಕಂಗಳು.
4. ಪ್ರಧಾನ ಕಾರ್ಯದರ್ಶಿ, ಕೆಇಬಿ ಪಿಂಚಣಿದಾರರ ಸಂಘ, ಕಾವೇರಿ ಭವನ, ಬೆಂಗಳೂರು, ಮೈಸೂರು.



Scanned with CamScanner